# ವಿನೂತನ ಕಥನ ಕಾರಣ

ನಮ್ಮ ಕುಮಾರವ್ಯಾಸ ತನ್ನ ಗದುಗಿನ ಭಾರತದ ಮೊದಲ ಪದ್ಯದಲ್ಲಿಯೇ ತನ್ನ ಇಷ್ಟ ದೈವವಾದ ಗದುಗಿನ ವೀರನಾರಾಯಣನನ್ನು 'ವಿನೂತನ ಕಥನ ಕಾರಣ' ಎಂದು ಸ್ತುತಿಸುತ್ತಾನೆ. ಅವನು ಹೇಳ ಹೊರಟದ್ದು ವ್ಯಾಸರ ಮಹಾಭಾರತವನ್ನು. ಆದ್ದರಿಂದಲೇ ಅವನು ವ್ಯಾಸ– ಕುವರ. 'ಕುವರವ್ಯಾಸ!' ವ್ಯಾಸರ ಮಹಾಭಾರತ 'ವಿನೂತನ ಕಥನ'ವಾಗುವುದು ಹೇಗೆ?

ಕುಮಾರವ್ಯಾಸನಿಗಿಂತ ಹಿಂದಿನವನಾದ ಪಂಪ, ತನ್ನ 'ವಿಕ್ರಮಾರ್ಜುನ ವಿಜಯ'ದಲ್ಲಿ ಮಹಾಭಾರತವನ್ನು ಕನ್ನಡಕ್ಕೆ ತರುವಲ್ಲಿ ತನ್ನದು ಲೌಕಿಕ ದೃಷ್ಟಿ ಎಂದಿದ್ದ. 'ಬೆಳಗುವೆನಿಲ್ಲಿ ಲೌಕಿಕಮಂ' ಎಂದಿದ್ದ. ಮಹಾಭಾರತವು ಇತಿಹಾಸವಾದುದರಿಂದ, ಇತಿಹಾಸವು ಕಾಲದ ರಂಗಮಂಚದಲ್ಲಿ ಮರಳಿ ಮರಳಿ ಅಭಿನೀತಗೊಳ್ಳುವ ಸ್ವಭಾವದ್ದಾದುದರಿಂದ, ಮಹಾಭಾರತದ ಅರ್ಜುನನನ್ನೂ ತನ್ನ ಕಾಲದ ತನ್ನ ಕಣ್ಣಮುಂದಿನ ದೊರೆಯಾದ ಅರಿಕೇಸರಿಯನ್ನೂ ಸಮೀಕರಣಮಾಡಿ– ತಗುಳ್ಚಿ– ಈ ಎರಡು ಪಾತ್ರಗಳೂ ಪರಸ್ಪರ ಬೆಳಕುಹಾಯಿಸುವಂತೆ ಮಾಡಿ, ಪಂಪ ಅದ್ಭುತವಾಗಿ ತನ್ನ ಕಾವ್ಯದಲ್ಲಿ ಲೌಕಿಕವನ್ನು ಬೆಳಗಿದ್ದ. ಮತ್ತು 'ಆಗಮ'ವನ್ನು ಅಂದರೆ ಆಧ್ಯಾತ್ಮಿಕತೆಯನ್ನು 'ಆದಿಪುರಾಣ'ದಲ್ಲಿ ಬೆಳಗುವೆನೆಂದಿದ್ದ. ಈ ಮೂಲಕ ಲೌಕಿಕತೆ ಮತ್ತು ಆಧ್ಯಾತ್ಮಿಕತೆಯನ್ನು ಬೇರ್ಪಡಿಸಿದ್ದ.

ಈ ದೃಷ್ಟಿಗಿಂತ ಭಿನ್ನವಾಗಿ, ಲೌಕಿಕದಲ್ಲಿಯೇ ಅಧ್ಯಾತ್ಮವು ಬೇರ್ಪಡಿಸಲು ಆಗದಂತೆ ಬೆರೆತಿದೆ; ಅವು 'ತಗುಳ್ಚಿ'ಯೇ ಇವೆ, ಲೌಕಿಕದಲ್ಲಿ ಅಧ್ಯಾತ್ಮವನ್ನು, ಲೋಕದಲ್ಲಿ ದೇವರನ್ನು, ಇತಿಹಾಸದಲ್ಲಿ ವೇದವನ್ನು ಗುರುತಿಸಬೇಕಾದರೆ, ನಮ್ಮ ಕಥನದ ಕೇಂದ್ರದಲ್ಲಿ ಕೃಷ್ಣನಿರಬೇಕು; ಈ ಅರ್ಥದಲ್ಲಿ ಕೃಷ್ಣನು 'ವಿನೂತಕಥನ ಕಾರಣ' ಎಂದು ಕುಮಾರವ್ಯಾಸ ಸೂಚಿಸುತ್ತಾನೆ. ಈ ಅರ್ಥವನ್ನು ಪೋಷಿಸುವಂತೆ, 'ಅರಸುಗಳಿಗಿದು ವೀರ, ದ್ವಿಜರಿಗೆ ಪರಮ ವೇದದ ಸಾರ' ಎಂದು ತನ್ನ ಕಾವ್ಯದ ಕುರಿತು ಹೇಳುತ್ತಾನೆ. 'ಇದ ವಿಚಾರಿಸೆ ಬರಿಯ ತೊಳಸಿಯ ಉದಕದಂತಿರೆ ಇಲ್ಲಿ ನೋಳ್ಪುದು ಪದುಮನಾಭನ ಮಹಿಮೆ'– ಎನ್ನುತ್ತಾನೆ.

ಮಹಾಭಾರತವು ಯುಗಾಂತ್ಯದ ರಕ್ತಸಿಕ್ತ ತಲ್ಲಣಗಳನ್ನು ಚಿತ್ರಿಸಿದ ಮಹಾಕಾವ್ಯವೆಂದು ಎಲ್ಲರೂ ಬಲ್ಲರು. ಕೃಷ್ಣನು ಈ ಕಥನದ ಕೇಂದ್ರವಾದರೆ, ಆಗ ಮಹಾಭಾರತದ ನೆತ್ತರುಗೆಂಪು ಬದಲಾಗುತ್ತದೆಯೆ? ಯುದ್ಧದ ಘೋರ ಕಡಿಮೆಯಾಗುತ್ತದೆಯೆ? ಅಥವಾ ಲೋಕದ ವಿನಾಶವನ್ನು ಅದು ಪದುಮನಾಭನ ಮಹಿಮೆ ಅಂದರೆ ದೈವಲೀಲೆ ಎಂಬ ಭಾವನೆಯಿಂದ ನೋಡುವುದು ಎಷ್ಟು ಸರಿ?

ಕುಮಾರವ್ಯಾಸ ಈ ಸಮಸ್ಯೆಯನ್ನು ಬಿಡಿಸಿಕೊಳ್ಳುವುದು ಹೀಗೆ: ಕೃಷ್ಣನು ಕಥನದ ಕೇಂದ್ರವಾದರೆ, ಆಗ, ಈ ಸೃಷ್ಟಿ ಹೇಗೆ ದೈವದಲೀಲೆ ಹಾಗೆ ವಿನಾಶವೂ ದೈವಲೀಲೆ ಎಂದು ಅರಿವಾಗುವುದು. ದೈವಲೀಲೆ ಎಂದು ಲೋಕದ ವಿನಾಶವನ್ನು ಅಂದರೆ ತನಗೆ ಪ್ರಿಯವಾದುದೆಲ್ಲದರ ವಿನಾಶವನ್ನು ತಿಳಿಯಬಲ್ಲವನು, ಈ ತಿಳುವಳಿಕೆಯ ಕಾರಣವಾಗಿಯೇ ತನ್ನಲ್ಲಿರುವ ಕರ್ತೃತ್ತ್ವ ಭಾವವನ್ನು ಮೀರಬಲ್ಲ. ಕರ್ತೃತ್ವ ಭಾವವೆಂದರೆ ಇದೆಲ್ಲವನ್ನೂ ತಾನು ಮಾಡಿದ್ದು, ತಾನು ಮಾಡಬಲ್ಲೆ ತಾನು ಏನೂ ಮಾಡಬಲ್ಲೆ, ತಾನು ಮಾಡಿದ್ದು ಇತರರಿಗೆ ಸಲ್ಲುವಂಥದಲ್ಲ, ನಾನು ಮಾತ್ರ ಅನುಭವಿಸಬೇಕಾಗಿರುವಂಥದು– ಇತ್ಯಾದಿ. ಈ ಭಾವವನ್ನು ಮೀರಿದವನು ಹಾಗೆ ಮೀರಿರುವುದರಿಂದಲೇ ಲೋಕದ ಸುವ್ಯವಸ್ಥೆಗೆ ತನಗೆ ತಿಳಿಯದೆಯೇ ನೆರವಾಗಬಲ್ಲ. ಅಥವಾ ದೈವವನ್ನು ಒಪ್ಪಿದವನನ್ನು ವ್ಯವಸ್ಥೆಗೆ ಒಳಪಡಿಸುವ ಅಗತ್ಯವೇ ಯಾವ ರಾಜನಿಗೂ ಇರುವುದಿಲ್ಲ; ಬರುವುದಿಲ್ಲ. ಈ ಅರ್ಥದಲ್ಲಿ, ಲೋಕದ ಬದುಕು 'ದೈವಲೀಲೆ' ಎನ್ನುವವನು ರಾಜ್ಯ ವ್ಯವಸ್ಥೆಯನ್ನೇ ಧಿಕ್ಕರಿಸಿದಂತೆ! ಒಳಗಿನಿಂದಲೇ ಧಿಕ್ಕರಿಸಿದಂತೆ! ರಾಜ್ಯವ್ಯವಸ್ಥೆಯನ್ನು ಧಿಕ್ಕರಿಸುವುದೆಂದರೆ ಯುದ್ಧವನ್ನೇ ಧಿಕ್ಕರಿಸಿದಂತಲ್ಲವೆ? ಒಳಬಗೆಯಲ್ಲಿ ಯುದ್ಧವನ್ನು ಧಿಕ್ಕರಿಸುವುದೇ ಶಾಂತಿಯ ದಿಕ್ಕಿನತ್ತ ಮುಖ ಮಾಡಿದಂತಲ್ಲವೆ? ರಾಜ್ಯ ವ್ಯವಸ್ಥೆಯನ್ನು ಬಯಸುವವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಎಲ್ಲರ ಮನಸ್ಸಿನಲ್ಲೂ ಯುದ್ಧದ ಬೀಜವನ್ನೇ ಬಿತ್ತುವುದಲ್ಲವೆ?

ಎಂಥ ವಿಚಿತ್ರ! ಎಂಥ ಒಳ ಹೆಣಿಗೆ! ಲೋಕದ ವಿನಾಶವನ್ನು ದೈವಲೀಲೆ ಎಂಬಂತೆ ನೋಡುವುದು ಮೇಲ್ನೋಟಕ್ಕೆ ಮೌಢ್ಯದಂತೆ, ಅಮಾನುಷತೆಯಂತೆ ಕಂಡ ಬಂದರೆ ಒಳಗಿನಿಂದ ನೋಡಿದರೆ ಈ ತಿಳುವಳಿಕೆಯೇ ಲೋಕದಲ್ಲಿ ಶಾಂತಿಯನ್ನು ಬಿತ್ತುವ – ತನಗೆ ಗೊತ್ತಿಲ್ಲದೇ ಬಿತ್ತುವ – ಮನೋಧರ್ಮವಾಗಿದೆ. ಶಾಂತಿಯನ್ನು ಸವಿಯುವ ಕಲೆಯನ್ನು ಕಲಿಸಲಾಗದಿದ್ದರೆ ಶಾಂತಿಯ ಬೀಜವನ್ನು ಬಿತ್ತಲಾಗುವುದೂ ಇಲ್ಲ.

ಕುಮಾರವ್ಯಾಸ 'ಲೋಕ ಸಮಿಧೆಗಳಗ್ನಿಕಾರ್ಯದ ಬ್ರಹ್ಮಚಾರಿವಟು' ಎಂದು ಕೃಷ್ಣನನ್ನು ವರ್ಣಿಸಿದ್ದಾನೆ. ಸಮಿಧೆಯ ತುಂಡುಗಳನ್ನು ಅಗ್ನಿಗೆ ಅರ್ಪಿಸಿ ಮಾಡುವ ಅಗ್ನಿಕಾರ್ಯ ಬ್ರಹ್ಮಚಾರಿ ವಟುವಿನ ದೈನಿಕ. ಇಲ್ಲಿ ಕೃಷ್ಣ ಅಂಥ ಬ್ರಹ್ಮಚಾರಿ. ಲೋಕಗಳೆನ್ನುವುದೇ ಸಮಿಧೆಯ ತುಂಡುಗಳು. ಮಹಾಭಾರತ ಯುದ್ಧವೇ ಎಲ್ಲವನ್ನೂ ಸುಡುವ ಅಗ್ನಿ. ಮತ್ತು ಕೃಷ್ಣನೆಂಬ ಬ್ರಹ್ಮಚಾರಿಗೆ ಈ ಅಗ್ನಿಕಾರ್ಯವೊಂದು ಸಹಜವಾದ ದೈನಿಕ!

ರಾಜರುಗಳೆಂಬ ರಾಜರುಗಳು ಕೂಡ– ಪಂಪನ ಅರಿಕೇಸರಿಯೂ ಸೇರಿ – ಈ ಅಗ್ನಿಕಾರ್ಯದಲ್ಲಿ ಸಮಿಧೆಯ ತುಂಡುಗಳಿಗಿಂತ ಏನೂ ಹೆಚ್ಚಲ್ಲ ಎಂದು ತೋರಿಸುವುದೇ ಕುಮಾರವ್ಯಾಸನ ನೂತನ ಕಥನವಾಗಿರಬಹುದು. ದೈವವನ್ನೂ, ಇದು ದೈವಲೀಲೆ ಎಂದು ಅನುಭವಿಸುವ ಭಕ್ತನ ಮನೋಧರ್ಮವನ್ನೂ 'ತಗುಳ್ಚಿ' ನೋಡುವುದೇ– ನೂತನ ಕಥನವಾಗಿರಬಹುದು. ಮತ್ತು ಭಕ್ತನ ಮನೋಧರ್ಮವೇ ಕಾವ್ಯವನ್ನು ಅನುಭವಿಸುವ ಮನೋಧರ್ಮವು ಕೂಡ ಎಂದು ಸೂಚಿಸಿ, ಭಕ್ತನನ್ನೂ ಸಹೃದಯನನ್ನೂ 'ತಗುಳ್ಚಿ' ನೋಡುವದೇ ನೂತನ ಕಥನವಾಗಿರಬಹುದು! ನೂತನ ಕಥನವೇ ನೂತನ ಶ್ರವಣವೂ ಆಗಿರಬಹುದು!

■ ತೋಷ

## ಮಾತೇ ಮುತ್ತು

★ ಗಂಡಾಗಲೀ, ಹೆಣ್ಣಾಗಲೀ; ಪ್ರತಿಫಲಾಪೇಕ್ಷೆ ಇಲ್ಲದೆ ನಿಸ್ವಾರ್ಥರಾಗಿದ್ದರೆ ಅತ್ಯಂತ ಯಶಸ್ವಿ ಆಗುತ್ತಾರೆ.

–ಸ್ವಾಮಿ ವಿವೇಕಾನಂದ

★ ದೇವರು ವಿಗ್ರಹಗಳಲ್ಲಿ ಇಲ್ಲ. ನಿಮ್ಮ ಭಾವನೆಗಳೇ ನಿಮ್ಮ ದೇವರು. ಆತ್ಮವೇ ನಿಮ್ಮ ದೇಗುಲ.

–ಚಾಣಕ್ಯ

★ ದುಃಖ ಪಡಬೇಡಿ. ನೀವೇನು ಕಳೆದುಕೊಂಡಿದ್ದೀರೊ ಅದು ಇನ್ನೊಂದು ರೂಪದಲ್ಲಿ ನಿಮ್ಮ ಬಳಿಗೆ ಬಂದೇ ಬರುತ್ತದೆ.

–ರೂಮಿ

★ ಜೀತ ಮತ್ತು ವಿಮುಕ್ತಿ ಮನಸ್ಸುಗಳಿಗೆ ಮಾತ್ರ ಸಂಬಂಧಿಸಿದ್ದು.

–ರಾಮಕೃಷ್ಣ ಪರಮಹಂಸ

★ ಸುಲಭದಲ್ಲಿ ಆಗಬೇಕು ಎನ್ನುವ ಆಸೆಯಿದ್ದರೆ ಕಲಿಕೆಯನ್ನು ಮರೆತುಬಿಡಿ. ಕಲಿಯಬೇಕು ಎಂಬ ಮನಸ್ಸಿದ್ದರೆ ಸುಲಭವಾಗಬೇಕು ಎನ್ನುವ ಧೋರಣೆಯನ್ನು ಬಿಟ್ಟುಬಿಡಿ.

–ನಾಗಾರ್ಜುನ

★ ಸಣ್ಣ ಪುಟ್ಟ ವಿಷಯಗಳಲ್ಲಿ ವಿಶ್ವಾಸವಿಡಿ. ಅಂತಿಮವಾಗಿ ನಿಮ್ಮ ಶಕ್ತಿ ಅಡಗಿರುವುದೇ ಅದರಲ್ಲಿ.

–ಮದರ್ ತೆರೇಸಾ

★ ಏನನ್ನಾದರೂ ಬಯಸಿದರೆ ನೋವುಣ್ಣಲೇಬೇಕು. ಏನನ್ನೂ ಬಯಸದೇ ಇರುವುದೇ ಅತ್ಯಂತ ಸಂತೋಷದಾಯಕ.

–ಬೋಧಿಧರ್ಮ

★ ಬಹಳ ಜನ ಸತ್ತಿದ್ದಾರೆ, ನೀವೂ ಸಾಯುತ್ತೀರಿ. ಮರಣ ಮೃದಂಗ ಮೊಳಗುತ್ತಲೇ ಇದೆ. ಜಗತ್ತು ಕನಸುಗಳ ಪ್ರೇಮದಲ್ಲಿ ಬಿದ್ದಿದೆ. ಕೊನೆಗೆ ಉಳಿಯುವುದು ಪ್ರಾಜ್ಞರ ನುಡಿಮುತ್ತುಗಳು ಮಾತ್ರ.

–ಸಂತ ಕಬೀರ

★ ನಿದ್ದೆಯೇ ಅತ್ಯುತ್ತಮವಾದ ಧ್ಯಾನ.

–ದಲೈ ಲಾಮ

★ ಭೌತಿಕ ಆಸೆಗಳು ಕಡಿಮೆಯಾದಷ್ಟೂ ನೀವು ಹೆಚ್ಚು ಸ್ವತಂತ್ರವಾಗಿ ಜೀವಿಸುತ್ತೀರಿ.

–ಉಮರ್ ಬಿನ್ ಖತ್ತಾಬ್

★ ಕಿವುಡರೂ ಕೇಳಬಲ್ಲ, ಕುರುಡರೂ ಕಾಣಬಲ್ಲ ಭಾಷೆ ಎಂದರೆ ಕರುಣೆ.

–ಮಾರ್ಕ್ ಟ್ವೈನ್